# ಶ್ರೀಮಾತೆಯವರೊಡನೆ ಮಾತುಕತೆ



ಭಕ್ತೆ ಸರಯೂ ಬಾಲಾ ದೇವಿ ಅವರ ನೆನಪುಗಳು:

ದಿನಾಂಕ: ೧೫. ೬. ೧೯೧೨

ಇಂದು ಸುಮಾರು ನಾಲ್ಕು ಗಂಟೆಯ ಹೊತ್ತಿಗೆ ಶ್ರೀಮಾತೆಯವರ ಬಳಿಗೆ ಹೋದಾಗ, ಅವರು ಹಲವಾರು ಸ್ತ್ರೀಭಕ್ತರ ಮಧ್ಯೆ ಕುಳಿತಿರುವುದನ್ನು ಕಂಡೆ. ನನ್ನನ್ನು ನೋಡಿ ಅವರು, "ಓ ಬಂದೆಯಾ, ಬಾಮ್ಮಾ, ಕುಳಿತುಕೊ" ಎಂದರು. ನೆರೆದ ಸ್ತ್ರೀಭಕ್ತರಲ್ಲಿ ಮಾಸ್ಟರ್ ಮಹಾಶಯನ ಪತ್ನಿ, ಡಾಕ್ಟರ್ ದುರ್ಗಾಪದರ ಹೆಂಡತಿ, ಗೌರೀ ಮಾ, ಗೌರೀ ಮಾಳ ಸಾಕು ಮಗಳಾದ ದುರ್ಗಾದೀದಿ ಮತ್ತು ವರಣಬಾಬುವಿನ ಚಿಕ್ಕಮ್ಮ - ಇವರು ಮಾತ್ರ ನನಗೆ ಗೊತ್ತಿದ್ದವರು. ಶ್ರೀಮಾತೆ ಇವರೆಲ್ಲರೊಡನೆ ನಗುನಗುತ್ತ ಮಾತನಾಡುತ್ತಿದ್ದಾರೆ. ಸರಳಾ ದೇವಿ ಬರೆದ 'ನಿವೇದಿತಾ' ಮತ್ತು 'ಭಾರತದಲ್ಲಿ ವಿವೇಕಾನಂದ' - ಈ ಪುಸ್ತಕಗಳನ್ನು ಗೌರೀಮಾಳಿಗೆ ಹೇಳಿ ತರಿಸಿಕೊಂಡೆ. ಶ್ರೀಮಾತೆಯವರಿಗೆ ನಿವೇದಿತಾ ಪುಸ್ತಕವನ್ನು ಓದಿ ಕೇಳಿಸಬೇಕು ಅಂಥ ನನಗೆ ಆಸೆ. ಅವರು ನನ್ನ ಕೈಯಲ್ಲಿದ್ದ ಪುಸ್ತಕ ನೋಡಿ "ಅದ್ಯಾವ ಪುಸ್ತಕವಮ್ಮಾ?" ಎಂದು ಕೇಳಿದರು. ನಾನು ಹೇಳಿದೆ. "ಸ್ವಲ್ಪ ಓದಮ್ಮಾ, ಕೇಳೋಣ. ಸರಳಾ ನನಗೂ ಒಂದು ಪ್ರತಿ ಕೊಟ್ಟು ಹೋಗಿದ್ದಾಳೆ. ನಾನು ಇನ್ನೂ ಯಾರ ಹತ್ತಿರವೂ ಓದಿಸಿ ಕೇಳಿಲ್ಲ" ಎಂದರು ಶ್ರೀಮಾತೆ. ಅಷ್ಟೊಂದು ಜನರ ಮಧ್ಯೆ ಓದಲು ಸಂಕೋಚ ಆದರೆ, ಸರಳಾ ಅಕ್ಕನ ಅದ್ಭುತ ಬರಹವನ್ನು ಶ್ರೀಮಾತೆಯವರಿಗೆ ಕೇಳಿಸಬೇಕು ಎನ್ನುವ ತವಕ, ಅದಕ್ಕೂ ಮೇಲಾಗಿ ಶ್ರೀಮಾತೆಯವರೇ ಆದೇಶ ನೀಡಿದ್ದಾರೆ. ಸರಿ, ಓದಲು ಶುರುಮಾಡಿದೆ. ಎಲ್ಲರ ಜೊತೆಗೆ ಶ್ರೀಮಾತೆಯವರೂ ಕಾತುರತೆಯಿಂದ, ಏಕಾಗ್ರತೆಯಿಂದ ಕೇಳಲು ಮುಂದಾದರು. ನಾನು ನಿವೇದಿತೆಯ ಭಕ್ತಿಭಾವದ ಸಂಬಂಧವಾಗಿ ಓದುತ್ತಿದ್ದಾಗ, ಶ್ರೀಮಾತೆಯವರ ಎರಡೂ ಕಣ್ಣುಗಳಲ್ಲಿ ಅಶ್ರುಧಾರೆ ಸುರಿಯುತ್ತಿತ್ತು. "ಆಹ್! ಎಂಥಹ ಭಕ್ತಿ ನಿವೇದಿತೆಯದು?! ಅವಳು ನನಗಾಗಿ ಏನನ್ನು ಕೂಡ ಮಾಡಲು ಸಿದ್ಧಳಿದ್ದಳು. ರಾತ್ರಿ ಹೊತ್ತು ನನ್ನನ್ನು ನೋಡಲು ಬಂದಾಗ, ದೀಪದ ಬೆಳಕು ನನ್ನ ಕಣ್ಣ ಮೇಲೆ ಬಿದ್ದು, ನನಗೆ ಕಷ್ಟವಾಗುತ್ತದೆ ಎಂದು ಕಾಗದದಿಂದ ದೀಪವನ್ನು ಮುಚ್ಚಿ ಓರೆ ಮಾಡಿ ಇಡುತ್ತಿದ್ದಳು. ನನಗೆ ನಮಸ್ಕರಿಸಿ, ತನ್ನ ಕರವಸ್ತ್ರದಿಂದ ಪಾದಧೂಳಿಯನ್ನು ಜೋಪಾನವಾಗಿ ತೆಗೆದುಕೊಳ್ಳುತ್ತಿದ್ದಳು. ನನ್ನ ಕಾಲುಗಳನ್ನು ಮುಟ್ಟಲು ಕೂಡ ಸಂಕೋಚ ಪಡುತ್ತಿದ್ದಳು." ಹೀಗೆ ಶ್ರೀಮಾತೆ ನಿವೇದಿತೆಯ ಬಗ್ಗೆ ನೆನಪಿಸಿಕೊಂಡರು. ಹೀಗೆ ಮಾತನಾಡುತ್ತ, ಅವಳ ನೆನಪು ಗಾಢವಾಗಿ, ಅವರು ಗಂಭೀರವಾಗಿ ಕುಳಿತರು.

ಅಲ್ಲಿ ನೆರೆದಿದ್ದವರೂ ಕೂಡ, ನಿವೇದಿತೆಯ ಬಗ್ಗೆ ತಮ್ಮ ತಮ್ಮ ಅನಿಸಿಕೆಗಳನ್ನು ಹೇಳಲು ಶುರುಮಾಡಿದರು. ದುರ್ಗಾ ದೀದಿ (ಗೌರೀಮಾಳ ಸಾಕುಮಗಳು) ಬಹಳ ದುಃಖದಿಂದ ಹೇಳಿದಳು: "ಭಾರತದ ದೌರ್ಭಾಗ್ಯ, ನಿವೇದಿತಾ ಇಷ್ಟು ಬೇಗ ಅಸುನೀಗಿದಳು." ಮತ್ತೊಬ್ಬ ಭಕ್ತೆ ತನ್ನ ಅನಿಸಿಕೆ ಹೀಗೆ ವ್ಯಕ್ತಪಡಿಸಿದಳು: "ನಿವೇದಿತೆಗೆ ಭಾರತಭೂಮಿ ಮಾತೃಭೂಮಿಯಂತಿತ್ತು. ಸರಸ್ವತಿ ಪೂಜೆಯ ದಿವಸ ಹೋಮದ ರಕ್ಷೆಯನ್ನು (ಹೋಮ ಮುಗಿದ ನಂತರ ಉಳಿಯುವ ಇದ್ದಿಲನ್ನು ಪುಡಿಮಾಡಿ, ತುಪ್ಪದ ಜೊತೆಗೆ ಸೇರಿಸಿ ಹಣೆಗೆ ಇಟ್ಟು ಕೊಳ್ಳುವ ಪದ್ಧತಿ ಇದೆ. ಅದನ್ನು ರಕ್ಷೆ ಎನ್ನುತ್ತಾರೆ.) ಹಣೆಯ ಮೇಲೆ ಇಟ್ಟುಕೊಂಡು, ಬರಿಗಾಲಿನಲ್ಲಿಯೇ ಓಡಾಡುತ್ತಿದ್ದಳು."

ಪುಸ್ತಕ ಓದುತ್ತಿರುವಾಗ ಶ್ರೀಮಾತೆ ಮಧ್ಯೆ ಮಧ್ಯೆ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಿದ್ದರು. ಪುಸ್ತಕವನ್ನು ಓದಿಯಾಯಿತು. "ನಿಷ್ಠಾವಂತರಿಗಾಗಿ ನನ್ನ ಮನಸ್ಸು ಕಾತುರವಾಗಿದೆಯಮ್ಮಾ, ವ್ಯಾಕುಲವಾಗಿದೆಯಮ್ಮಾ" ಎಂದರು. ನಂತರ ಬಟ್ಟೆ ಬದಲಿಸಿ ಬಂದು, ಶ್ರೀರಾಮಕೃಷ್ಣರಿಗೆ ಸಂಜೆಯ ನೈವೇದ್ಯವನ್ನು ಸಮರ್ಪಿಸಿದರು. ಅಂದಿನ ದಿನ ತಮ್ಮ ಕೈಯಿಂದಲೇ ಶ್ರೀಮಾತೆಯವರು ಹೂವಿನ ಹಾರವನ್ನು ಕಟ್ಟಿ, ಸಂಜೆಗೆ ದೇವರಿಗೆ ಹಾಕಲು ದೇವರ ಮುಂದೆ ಇಟ್ಟಿದ್ದರು. ಅದರ ಮೇಲೆ ನೈವೇದ್ಯಕ್ಕಾಗಿ ತಂದಿಟ್ಟದ್ದ ರಸಗುಲ್ಲಾದ ರಸ ಹರಿದು, ಹಾರದ ಮೇಲೆಲ್ಲ ಕೆಂಪು ಇರುವೆ ಹತ್ತಿಕೊಂಡಿತ್ತು. ಶ್ರೀಮಾತೆಯವರು ಅದನ್ನು ಕಂಡು ನಗುತ್ತ ಹೇಳಿದರು: "ಅರೇ, ಇದೇನಿದು. ಈ ಹಾರವನ್ನು ಶ್ರೀರಾಮಕೃಷ್ಣರಿಗೆ ಹಾಕಿದರೆ, ಅದು ಅವರಿಗೆ ಕಚ್ಚುವು ದಿಲ್ಲವೇ? ಇದೇನು ನೀನು ಮಾಡಿರುವುದು, ರಾಸಬಿಹಾರಿ (ಬ್ರಹ್ಮಚಾರಿಯ ಹೆಸರು)? " ನಂತರ ಹಾರದಿಂದ ಇರುವೆಗಳನ್ನು ನಾಜೂಕಾಗಿ ಬಿಡಿಸಿ, ತಾವೇ ಶ್ರೀರಾಮಕೃಷ್ಣರ ಪಠಕ್ಕೆ ಹಾಕಿ ಅಲಂಕರಿಸಿದರು. ಎಲ್ಲರ ಎದುರಿಗೆ ತಮ್ಮ ಪತಿಗೆ ಶ್ರೀಮಾತೆಯವರು ಹಾರ ಹಾಕುತ್ತಿರುವುದನ್ನು ಕಂಡು, ರಾಧುವಿನ ತಾಯಿ ಸುರಬಾಲೆ (ಶ್ರೀಮಾತೆಯವರ ತಮ್ಮನ ಹುಚ್ಚು ಹೆಂಡತಿ. ಅವಳನ್ನು ಭಕ್ತರು ಹುಚ್ಚು ಮಾಮಿ ಎಂದೇ ಕರೆಯುತ್ತಿದ್ದರು) ಮುಸಿ ಮುಸಿ ನಗತೊಡಗಿದಳು. ಶ್ರೀಮಾತೆಯವರ ಆದೇಶದಂತೆ, ಗೌರೀ ಮಾ ಎಲ್ಲರಿಗೂ ಪ್ರಸಾದ ಕೊಟ್ಟಳು.

ಆಗ ಒಬ್ಬಳು ಸ್ತ್ರೀಭಕ್ತೆ " ಅಮ್ಮಾ, ನನಗೆ ಐದು ಹೆಣ್ಣು ಮಕ್ಕಳಿದ್ದಾರೆ. ಅವರಿಗೆಲ್ಲಾ ಮದುವೆ ಮಾಡಲು ಕಷ್ಟ ಬಹಳ ದುಃಖದಲ್ಲಿದ್ದೇನೆ" ಎಂದಳು. ಅದಕ್ಕೆ ಶ್ರೀಮಾತೆಯವರು ಹೀಗೆ ಹೇಳಿದರು: "ಮದುವೆ ಮಾಡಲು ಆಗದಿದ್ದರೆ, ಅಷ್ಟೊಂದು ಚಿಂತಿಸುವುದೇತಕ್ಕೆ? ಅವರನ್ನು ನಿವೇದಿತೆಯ ಶಾಲೆಗೆ ಸೇರಿಸು. ಓದುಬರಹ ಕಲಿತು, ಚೆನ್ನಾಗಿರುತ್ತಾರೆ." ಈ ಮಾತಿಗೆ ಇನ್ನೊಬ್ಬಳು ಭಕ್ತೆ ಸೇರಿಸಿದಳು: " ಶ್ರೀಮಾತೆಯವರ ಮೇಲೆ ಭಕ್ತಿವಿಶ್ವಾಸ ಇದೆಯೋ ಇಲ್ಲವೋ? ಇದ್ದರೆ ಅವರು ಹೇಳಿದಂತೆ ಮಾಡು. ನಿನ್ನ ಮಕ್ಕಳು ಚೆನ್ನಾಗಿರುತ್ತಾರೆ. ಶ್ರೀಮಾತೆಯವರು ಹೇಳಿದ ಮೇಲೆ ಇನ್ನೇನು ಭಯ?" ವಿಚಿತ್ರ! ಆ ಹೆಂಗಸಿಗೆ ಈ ಮಾತುಗಳು ರುಚಿಸಲಿಲ್ಲ. ಮತ್ತೊಬ್ಬ ಭಕ್ತೆ " ಈ ಕಾಲದಲ್ಲಿ ಮದುವೆ ಮಾಡಿಕೊಳ್ಳಬಯಸುವ ಹುಡುಗರು ಸಿಕ್ಕುವುದೇ ಕಷ್ಟ" ಎಂದಳು. ಅದಕ್ಕೆ ಶ್ರೀಮಾತೆಯವರು ಹೇಳಿದರು: "ಆಹಾ! ಈಗಿನ ಕಾಲದ ಹುಡುಗರಿಗೆ ಸಂಸಾರ ಎಷ್ಟು ಅನಿತ್ಯ ಎನ್ನುವುದು ಮನದಟ್ಟಾಗುತ್ತಿದೆ. ಸಂಸಾರದಿಂದ ಎಷ್ಟು ದೂರವಿರಲು ಸಾಧ್ಯವೋ ಅಷ್ಟೂ ಒಳ್ಳೆಯದು."

(ಮುಂದುವರಿಯುವುದು)